ಸಿ ಎಂ ಸಿ .5/2018
ಆರ್ ಡಬ್ಲ್ಯೂ-1

ದಿನಾಂಕ 29.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ - ಅರ್ಜಿದಾರರ ಪರ ವಕೀಲರಾದ ಶ್ರೀ ಕೆ.ಪಿ.ಬಿ ರವರಿಂದಃ-

ನಾನು ಬಿ.ಡಿ.ಎಸ್ ಪದವೀದರನಾಗಿದ್ದೇನೆ. ಅರ್ಜಿದಾರರು ನಮ್ಮ ಪಕ್ಕದ ಮನೆಯವರು. ಅರ್ಜಿದಾರರು ನಮ್ಮ ಕುಟುಂಬದವರ ವಿರುದ್ಧ ಮೂರು ಸಿವಿಲ್ ದಾವೆಗಳನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ನಾವು ಸಹಾ ಅರ್ಜಿದಾರರ ವಿರುದ್ಧ ಸಿವಿಲ್ ದಾವೆಗಳನ್ನು ದಾಖಲಿಸಿರುತ್ತೇವೆ. ನಮ್ಮಗಳ ನಡುವೆ ಕ್ರಿಮಿನಲ್ ಪ್ರಕರಣವೂ ಸಹಾ ಇರ್ತ್ಯರ್ಥಕ್ಕಾಗಿ ಬಾಕಿ ಇದೆ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 6 ರಲ್ಲಿ ನಮೂದಿಸಿರುವಂತೆ ದಿನಾಂಕ 04.10.1999 ರಲ್ಲಿ ಅರ್ಜಿದಾರರ ತಂದೆಗೆ ಸಮನ್ಸ್ ಜಾರಿಯಾಗಿರುವುದಿಲ್ಲ, ಬದಲಿಗೆ ದಿನಾಂಕ 25.09.1999 ರಂದು ಜಾರಿಯಾಗಿರುತ್ತದೆ. ಆ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯ ಆಧಾರದ ಮೇಲೆ ಅಸಲು ದಾವಾ ಸಂಖ್ಯೆ 66/1999 ರಲ್ಲಿ ಅರ್ಜಿದಾರರ ತಂದೆಗೆ ಸಮನ್ಸ್ ಜಾರಿಯಾಗಿರುವುದಾಗಿ ನಾನು ತಿಳಿಸಿರುತ್ತೇನೆ. ಅರ್ಜಿದಾರರು ಮತ್ತು ಅವರ ತಂದೆ ಒಟ್ಟಿಗೆ ವಾಸವಾಗಿದುದ್ದರಿಂದ, ತಂದೆಗೆ ಸಮನ್ಸ್ ಜಾರಿಯಾದ ವಿಚಾರ ಅರ್ಜಿದಾರರಿಗೆ ಗೊತ್ತಾಗಿರುತ್ತದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯ ಪ್ಯಾರಾ 6 ರಲ್ಲಿ ತಿಳಿಸಿರುತ್ತೇನೆ. ಸಮನ್ಸ್ ನಲ್ಲಿ ವಾದಪತ್ರವನ್ನು ಲಗತ್ತಿಸಿರುವುದಾಗಿ ನಮೂದಿಸಿರುವುದರಿಂದ ಸಮನ್ಸ್‌ನೊಂದಿಗೆ ವಾದಪತ್ರವನ್ನು ಅರ್ಜಿದಾರರ ತಂದೆಗೆ ನೀಡಲಾಗಿರುತ್ತದೆ ಎಂದು ನಾನು ಊಹಿಸಿರುತ್ತೇನೆ.

ಅರ್ಜಿದಾರರ ತಂದೆಗೆ ಮಧ್ಯಪಾನ ಮಾಡುವ ಚಟ ಇತ್ತು ಎಂದರೆ ಸರಿಯಲ್ಲ. ಅರ್ಜಿದಾರರ ತಂದೆಗೆ ಮಧ್ಯಪಾನದ ಚಟ ಇದುದ್ದರಿಂದ, ಮನೆಯ ಎಲ್ಲಾ ವ್ಯವಹಾರವನ್ನು ಅರ್ಜಿದಾರರ ತಂದೆಯ ತಂಗಿಯಾದ ಗಂಗಮ್ಮ @ ಕಮಲ ಹಾಗೂ ಆಕೆಯ ಗಂಡ ಕುಟ್ಟಪ್ಪ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಕುಟ್ಟಪ್ಪರವರು ಮೂಲತಃ ಬಿ ಶೆಟ್ಟಿಗೇರಿ ಗ್ರಾಮದ ವಾಸಿಯಾಗಿದ್ದರೂ

ಸಹಾ ಅರ್ಜಿದಾರರ ಮನೆಯಲ್ಲಿ ವಾಸವಾಗಿದ್ದು, ಅರ್ಜಿದಾರರ ಪಿತ್ರಾರ್ಜಿತ ಸ್ವತ್ತುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಿಶಾನೆ ಆರ್ 18 ಇಂಗ್ಲೀಷ್ ಭಾಷೆಯಲ್ಲಿದೆ ಎಂದರೆ ಸರಿ. ನಿಶಾನೆ ಆರ್ 18 ರಲ್ಲಿ ಅರ್ಜಿದಾರರ ತಂದೆ ವಾದಪತ್ರವನ್ನು ಸ್ವೀಕರಿಸಿರುವುದಾಗಿ ನಮೂದಿಸಿರುವುದಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 66/1999 ರಲ್ಲಿ ನಾನು 8 ನೇ ಪ್ರತಿವಾದಿಯಾಗಿದ್ದು, ಅರ್ಜಿದಾರರ ತಂದೆ 5 ನೇ ಪ್ರತಿವಾದಿಯಾಗಿದ್ದರು ಎಂದರೆ ಸರಿ, ಅವರನ್ನು ಎಂ.ಎಂ ಪೂವಣ್ಣ ಎಂಬ ವಕೀಲರು ಪ್ರತಿನಿದಿಸುತ್ತಿದ್ದರು ಎಂದರೆ ಸರಿ. ಆ ದಾವೆಯ ವಾದಿಗಳು ಎಂ.ಕೆ.ಪಿ ವಕೀಲರ ಮೂಲಕ ಪ್ರತಿನಿಧಿಸುತ್ತಿದ್ದರು ಎಂದರೆ ಸರಿ. 5 ನೇ ಪ್ರತಿವಾದಿ ಪ್ರತ್ಯೇಕವಾದ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದರು ಎಂದರೆ ಸರಿ. ಅವರು ವಾದಿಗಳಿಗೆ ಪೂರಕವಾಗಿ ಪ್ರತಿವಾದಪತ್ರವನ್ನು ಸಲ್ಲಿಸಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.